# 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

**ಎಸ್.ಸಿ .ನಂ:5010/2022**

**ಪಿರ್ಯಾದಿ** : ರಾಜ್ಯ ಸರ್ಕಾರದ ಪರವಾಗಿ
ವಿರಾಜಪೇಟೆ ನಗರ ಪೊಲೀಸ್

ವಿರುದ್ಧ

**ಆರೋಪಿ** : 3 ಶಿವರಾಜ್ ತಂದೆ ಪೌತಿ ತಿಮ್ಮಯ್ಯ,
ಪ್ರಾಯ 37 ವರ್ಷ, ಕಾಳಮ್ಮ ಕಾಲೋನಿ,
ಕುಶಾಲನಗರ ಕೊಡಗು ಜಿಲ್ಲೆ.

## ಸಿ.ಆರ್.ಪಿ.ಸಿ. ಕಲಂ 313 ರಡಿಯಲ್ಲಿ ಆರೋಪಿತನ ಹೇಳಿಕೆ

ಪ್ರ 1 : ಅಭಿಯೋಜನೆಯ ಪರ ನಡೆದ ಎಲ್ಲಾ ಸಾಕ್ಷ್ಯಗಳನ್ನು ಕೇಳಿರುವಿರಾ?

ಉ: ತಿಳಿದಿದೆ

**ಪ್ರ 2:** ಪ್ರಾಸಾ–**4** ಸಿ.ಟಿ.ಜಯಕುಮಾರ್ ಡಿ.ವೈ.ಎಸ್.ಪಿ ತಮ್ಮ ಸಾಕ್ಷ್ಯದಲ್ಲಿ ದಿ**:09.01.2021** ರಂದು ಅರ್ಜಿ ಗ್ರಾಮದ ಮಿಸ್ಟಿ ಹೋಂ ಸ್ಟೇ ನಲ್ಲಿ **1**ನೇ ಆರೋಪಿ ವೇಶ್ಯಾವಾಟಿಕೆ ನಡೆಸುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ನಿಪಿ–**9** ರಂತೆ ದೂರನ್ನು ತಯಾರಿಸಿದ್ದು, ಅದರಂತೆ ವಿರಾಜಪೇಟೆ ನಗರ ಪೊಲೀಸರು ಪ್ರಕರಣ ದಾಖಲಿಸಿ ತನಿಖೆಯನ್ನು ವಹಿಸಿಕೊಂಡಿದ್ದಾಗಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉ** : **ಸುಳ್ಳು**

**ಪ್ರ.3** : ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಪ್ರಕರಣ ದಾಖಲಾದ ನಂತರ ಚಾಸಾ–**7** ರಿಮದ **11** ರ ಸಿಬ್ಬಂದಿ ಹಾಗೂ ಚಾಸಾ–**16** & **17** ರವರನ್ನು ಠಾಣೆಗೆ ಕರೆಸಿ ವಿಚಾರ ತಿಳಿಸಿ ಅವರೊಂದಿಗೆ ದಾಳಿ ಮಾಡಲು **1**ನೇ ಆರೋಪಿಯ ಮನೆಯ ಬಳಿ ಹೋಗಿದ್ದು, ಸಂಜೆ **4.00** ಗಂಟೆಗೆ ಮೂರು ಜನ ಮೊದಲನೇ ಮಹಡಿಯಲ್ಲಿ ಇರುವುದು ಕಂಡು ಬಂದಿದ್ದು, ಇಬ್ಬರು ವ್ಯಕ್ತಿಗಳು ಹೊರಾಂಡದಲ್ಲಿ ಒಬ್ಬ ವ್ಯಕ್ತಿ ತಮ್ಮನ್ನು ನೋಡಿ ಓಡಿ ಹೋದ ಎಂದು ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.4 : ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಇಬ್ಬರು ವ್ಯಕ್ತಿಗಳ ಪೈಕಿ ಕೆ.ಎಸ್.ಹೇಮಲತ, ಮಾಲಿಕರ ಹೆಂಡತಿಯಾಗಿದ್ದು, ಮತ್ತೊಬ್ಬರ ಹೆಸರು ಶಿವರಾಜ್ ಆಟೋ ಡ್ರೈವರ್ ಎಂದು ಹೇಳಿದ್ದು, ಅವರ ಸಮಕ್ಷಮ ದಾಳಿಯನ್ನು ನಡೆಸಿದ್ದಾಗಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.5 : ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಕಟ್ಟಡದಲ್ಲಿ ಪೂರ್ವ ಭಾಗದಲ್ಲಿ **2** ರೂಂಗಳಿದ್ದು, ಉತ್ತರ ಭಾಗದ ರೂಂ ನಲ್ಲಿ ಪಂಚರ ಸಮಕ್ಷಮ ಬಾಗಿಲನ್ನು ತೆಗೆಸಲಾಗಿ ಒಬ್ಬ ವ್ಯಕ್ತಿ ಬಾಗಿಲನ್ನು ತೆಗೆದು ಬಂದಿದ್ದು, ಮತ್ತೊಬ್ಬ ಹೆಂಗಸು ಅರೆ ನಗ್ನ ಸ್ಥಿತಿಯಲ್ಲಿ ಇರುವುದು ಕಂಡು ಬಂದಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.6 : ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ವ್ಯಕ್ತಿಗಳನ್ನು ಪ್ರಶ್ನಿಸಲಾಗಿ ಆಕೆಯ ಹೆಸರು ಯಾಸ್ಮೀನ್, ಶಿವರಾಜ್ ರವರು ಕುಶಾಲನಗರದಿಂದ ಕರೆದುಕೊಂಡು ಬಂದಿದ್ದಾಗಿ **1** & **2**ನೇ ಆರೋಪಿತರು ರೂಂ ಗೆ ಕಳುಹಿಸಿ **1**ನೇ ಆರೋಪಿ **4000** ಗಳನ್ನು ಕೊಟ್ಟಿದ್ದು, ಇಬ್ಬರ ವ್ಯಕ್ತಿಗಳ ಜೊತೆ ವೇಶ್ಯಾವಾಟಿಕೆ ನಡೆಸುವಂತೆ ಹೇಳಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.7 : ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಮಹಿಳೆಯು **1** & **2**ನೇ ಆರೋಪಿತರು ಹೆಚ್ಚಿನ ವ್ಯಕ್ತಿಗಳೊಂದಿಗೆ ವೇಶ್ಯಾವಾಟಿಕೆ ನಡೆಸಿದ್ದಲ್ಲಿ ಹಚ್ಚಿನ ಹಣ ಕೊಡುವುದಾಗಿ ಭರವಸೆ ನೀಡಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.8 : ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ರೂಂ ನಲ್ಲಿ ಇದ್ದ ವ್ಯಕ್ತಿಗಳು ತಮ್ಮ ಹೆಸರು ಸುಜಿತ್ ಹಾಗೂ ದಿವಾಕರ್ ಹೋಂ ಸ್ಟೇ ಮಾಲಿಕರು ಮಹಿಳೆಯ ಜೊತೆ ಲೈಂಗಕ ಕ್ರಿಯೆ ನಡೆಸಲು ಪ್ರತಿ ಯೊಬ್ಬರಿಂದ **5000** ಬೇಡಿಕೆ ಇಟ್ಟಿದ್ದು, ಅವರು

**8000** ಗಳನ್ನು ನೀಡಿದ್ದು, ಬಾಕಿ ಹಣವನ್ನು ರೂಂ ಖಾಲಿ ಮಾಡುವ ಸಮಯದಲ್ಲಿ ನೀಡುವುದಾಗಿ ಹೇಳಿದ್ದು, ಸದರಿ ಮಹಿಳೆಯೊಂದಿಗೆ ಲೈಂಗಿಕ ಕ್ರಿಯೆ ನಡೆಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.9 : ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ರೂಂ ಅನ್ನು ಜಪ್ತು ಮಾಡಲಾಗಿ **500** ರೂ ಮುಖ ಬೆಲೆಯ **8** ನೋಟುಗಳು ಮು.ಮ.**1**, ಮು.ಮ.**2** ರಂತೆ ಉಪಯೋಗಿಸಿದ **2** ಕಾಂಡೋಂಗಳು ಹಾಗೂ **8** ಉಪಯೋಗಸೇ ಇರುವ ಕಾಂಡೋಂ ಹಾಗೂ ಕಾಮ ಸೂತ್ರ ಇವರುಗಳನ್ನು ಮು.ಮ.**3** & **4** ರಂತೆ ವಶಪಡಿಸಿಕೊಂಡಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.10 : ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು **2**ನೇ ಆರೋಪಿಯು ಹೋಂ ಸ್ಟೇ ರಿಜಿಸ್ಟರ್ ಹಾಜರು ಪಡಿಸಿದ್ದು, ಪ್ರಾಸಾ–**1** ರಿಂದ **3** ರವರ ಬಗ್ಗೆ ಯಾವುದೇ ನಮೂದು ಇಲ್ಲ ಎಂದು ಹೇಳಿದ್ದು, ಹಾಗೂ ಹೋಂ ಸ್ಟೇ ಲೈಸೆನ್ಸ್ ಹಾಜರು ಪಡಿಸಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ11 ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಆ ಬಗ್ಗೆ ಸ್ಥಳದಲ್ಲಿ ನಿಪಿ–**2** ರಂತೆ ಮಹಜರ್ ಮಾಡಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : **ಸುಳ್ಳು**

ಪ್ರ12 ಪ್ರಾಸಾ–4 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, **1**ನೇ ಆರೋಪಿಯನ್ನು ದಸ್ತಗಿರಿ ಮಾಡಿದ್ದು, ಮು.ಮ.**5 2000** ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಅಮಾನತ್ತು ಪಡಿಸಿಕೊಂಡಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ13 ಪ್ರಾಸಾ-5 ಶ್ರೀಮತಿ ನಳಿನಿ ಮುಖ್ಯ ಮಹಿಳಾ ಪೇದೆ ರವರು ತಮ್ಮ ಸಾಕ್ಷ್ಯದಲ್ಲಿ ಪ್ರಾಸಾ-**4** ರವರ ನಿರ್ದೇಶನದಂತೆ **1**ನೇ ಆರೋಪಿಯ ಹೋಂ ಸ್ಟೇಗೆ ದಾಳಿ ಮಾಡಲು ದಿ:**09.01.2021** ರಂದು ಹೋಗಿದ್ದು, **2** & **3**ನೇ ಆರೋಪಿತರು ಹಾಜರಿದ್ದು, **1**ನೇ ಆರೋಪಿಯು ಓಡಿ ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ14 ಪ್ರಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ 1ನೇ ಮಹಡಿಯ ರೂಂ ಅನ್ನು ತೆಗೆಸಲಾಗಿ ಆ ವ್ಯಕ್ತಿ ಅರೆ ನಗ್ನ ಸ್ಥಿತಿಯಲ್ಲಿ ಇದ್ದು, ಪ್ರಾಸಾ-2 ರವರು ಆ ರೂಂ ನಲ್ಲಿ ಇದ್ದು 1ನೇ ಆರೋಪಿಯು 5000 ಗಳನ್ನು ಕೊಡುವುದಾಗಿ ಆಕೆಯನ್ನು 3ನೇ ಆರೋಪಿ ಕುಶಾಲನಗರದಿಂದ ಕರೆದುಕೊಮಡು ಬಂದಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.15 : ಪ್ರಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿವಾಕರ್ ಹಾಗೂ ಸುಜಿತ್ ರವರು ರೂಂ ನಲ್ಲಿ ಇದ್ದು ಅವರೊಮದಿಗೆ ಲೈಂಗಿಕ ಕ್ರಿಯೆ ನಡೆಸಿದ್ದು, ಸ್ಥಳದಲ್ಲಿ ಮು.ಮ2 ರಿಂದ 5 ಅನ್ನು ನಿಪಿ-2 ಮಹಜರ್ ನಂತೆ ಅಮಾನತ್ತು ಪಡಿಸಿಕೊಂಡಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.16 : ಪ್ರಾಸಾ-8 ಜಗದೀಶ್ ದೂಳಶೆಟ್ಟೆ ರವರು ತಮ್ಮ ಸಾಕ್ಷ್ಯದಲ್ಲಿ ದಿ:09.01.2021 ರಂದು ಪ್ರಾಸಾ-4 ರವರು ನಿಪಿ-9 ರಂತೆ ದೂರು ನೀಡಿದ್ದು, ಪ್ರಕರಣ ದಾಖಲಿಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.17 : ಪ್ರಾಸಾ8 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಪ್ರಕರಣ ದಾಖಲಿಸಿದ ನಂತರ ಪ್ರಾಸಾ-4 ರವರ ಜೊತೆ ಅರ್ಜಿ ಗ್ರಾಮದ ಮಿಸ್ತ್ರೀ ಹೋಂ ಸ್ಟೆ ಗೆ ದಾಳಿಗೆ ಹೋಗಿದ್ದು, 1ನೇ ಮಹಡಿಯಲ್ಲಿ ಮೂರು ಜನ ಇದ್ದು, ಒಬ್ಬ ವ್ಯಕ್ತಿ ಓಡಿ ಹೋಗಿದ್ದು, 2 & 3 ನೇ ಆರೋಪಿತರಿಗೆ ದಾಳಿಯ ಬಗ್ಗೆ ತಿಳಿಸಿದೆವು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

ಪ್ರ.18 : ಪ್ರಾಸಾ8 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ರೂಂ ಅನ್ನು ತೆಗೆಸಲಾಗಿ ಪ್ರಾಸಾ-1 & 3 ರವರು ಇದ್ದು, ಪ್ರಾಸಾ-2 ರವರು ಸದರಿ ವ್ಯಕ್ತಿಗಳೊಂದಿಗೆ ಲೈಂಗಿಕ ಕ್ರಿಯೆ ನಡೆಸಿದ್ದದಾಗಿ, 1ನೇ ಆರೋಪಿಯು ಆಕೆಯನ್ನು 3ನೇ ಆರೋಪಿಯ ಕಡೆಯಿಂದ ಕರೆಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

**ಪ್ರ.19** : ಪ್ರಾಸಾ-**8** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸ್ಥಳದಲ್ಲಿ ಮು.ಮ.**1** ರಿಂದ **5** ವಸ್ತುಗಳನ್ನು ಮಹಜರ್ ಮಾಡಿ ವಶಪಡಿಸಿಕೊಂಡಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

**ಪ್ರ.20** : ಪ್ರಾಸಾ-**9** ರಾಮರೆಡ್ಡಿ ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ-**21** ರಂತೆ ಕೂರ್ಗ್ ಮಿಸ್ಟ್ ಹೋಂ ಸ್ಟೇ ರಿಜಿಸ್ಟ್ರೇಷನ್ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದು, ಅದೇ ದಿನ ಆಟೋ ರಿಕ್ಷಾ ದ ಬಿ.ಎಕ್ಸಟ್ರಾಕ್ಟ್ ಅನ್ನು ಹಾಗೂ ಇನ್ಸೂರೆನ್ ಅನ್ನು ನಿಪಿ-**24** ಹಾಗೂ ಮಾಲೀನ್ಯ ಪ್ರಮಾಣ ಪತ್ರ ವನ್ನು ನಿಪಿ-**25** ರಂತೆ ಪಡೆದಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉ : ಸುಳ್ಳು

**ಪ್ರ.21** : ಈ ಮೊಕದ್ದಮೆಯ ಬಗ್ಗೆ ನೀವೇನಾದರೂ ಹೇಳುವುದಿದೆಯೇ?

ಉ : ಇಲ್ಲ

ಪ್ರ.22 : ನಿಮ್ಮ ಪರ ಸಾಕ್ಷ್ಯ ವಿಚಾರಣೆ ನಡೆಸಲಿಚ್ಚಿಸುವಿರಾ?

ಉ : ಇಲ್ಲ

ಸಹಿ/–

**(ಎಸ್.ನಟರಾಜ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)